Practitioners in the concerned systems of medicine The quistion whether the revant Acts and Rules might be amended so as to provide for such registration will be examined.

(c) No.

SRI PRABHAKAR TELKAR.—May I know the time required by the Government to examine and amend the Rules and the Act to register the unregistered Ayurvedic, Unani and Homoeopathic practitioners ?

† SRI H. SIDDAVEERAPPA.—It is in the Law Department

SRI PRABHAKAR TELKAR.—Whether the Government is aware that such unregistered medical practitioners are giving medicines which are harmful to the patients, and what steps are proposed to be taken against them ?

SRI H. SIDDAVEERAPPA —They have to register themselves. The Act and Rules are there. Even now unregistered practitioners are there.

SRI PRABHAKAR TELKAR —Why the Government is not thinking of registeriag these Ayurvedic, Unani and Homoeopathic practitioners in the modern system of medicine ?

SRI H. SIDDAVEERAPPA —It is not advisable to mix both ; that is a different system and this is a different system.

ಆಂಜನೇಯ ಬ್ಲಾಕಿನಲ್ಲಿ ಗುಡಿಸಲಂ ವಾಸಿಗಳಿಗೆ ನಿವೇಶಗಳನ್ನು ಒದಗಿಸುವುದು

೭೮೦ ಶ್ರೀ ಎಂ ಎಚ್. ಜಯಪ್ರಕಾಶ್ ನಾರಾಯಣ್ (ಸಿಸಿ).—ಕಾನೂನು ಹಾಗೂ ನಗರಾಡಳಿತ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಬೆಂಗಳೂರು ಕಾರ್ಪೊರೇಷನ್ನಿನವರು ೧,೬೮,೦೦೦ ರೂ.ಗಳ ಅಂದಾಜಿನಲ್ಲಿ ೭೨ ಸಂಸಾರಗಳಿಗೆ ಈಸ್ಟ್ ಆಂಜನೇಯ ಬ್ಲಾಕಿನಲ್ಲಿ ಗುಡಿಸಲುವಾಸಿಗಳಿಗೆಲ್ಲಾ ನಿವೇಶನ ಒದಗಿಸುವ ಯೋಜನೆ ಕಾರ್ಯಗತವಾಗಿರಲು ಕಾರಣವೇನು ;

(ಆ) ಈ ಕೊಳಚೆ ಪ್ರದೇಶದಲ್ಲಿ ವಾಸ ಮಾಡುವ ಈ ೭೨ ಗುಡಿಸಲು ವಾಸಿ ಸಂಸಾರಗಳಿಗೆ ನಿರ್ಮಾಲೀಕರಣ ನೀತಿಗೆ ಅನುಗುಣವಾಗಿ ರಾಜ್ಯ ಸರ್ಕಾರ ಸೂಚನೆ ನಂ. ಹೆಚ್.ಎಂ.ಎ. ೨೧--ಎಂ.ಎಸ್.ಟಿ ೬೯, ೨೪-೭-೧೯೬೧ರ ಪ್ರಕಾರ ಕಾರ್ಪೊರೇಷನ್ ಕಮಿಷನರ್‌ರವರು ಕೈಕೊಂಡ ಕ್ರಮಗಳು ಯಾವ ಹಂತದಲ್ಲಿ ಇವೆ ?

ಶ್ರೀ ಡಿ. ಕೆ. ನಾಯ್ಕರ್ ಕಾನೂನು ಹಾಗೂ ನಗರಾಡಳಿತ ಮಂತ್ರಿಗಳು —

(ಅ) ಗುಡಿಸಲಂ ವಾಸಿಗಳಿಗೆಲ್ಲಾ ನಿವೇಶನ ಒದಗಿಸುವ ಯೋಜನೆ ಕಾರ್ಯಗತವಾಗದಿರಲು ಕಾರಣಗಳು.—

(೧) ಮೊದಲು ೨೨ ಸಂಸಾರಗಳ ಜೊತೆಗೆ ಹೆಚ್ಚಿಗೆ ೧೨೮ ಸಂಸಾರಗಳು ಅಲ್ಲಿವೆ (ಅಂದರೆ ೨೦೦ ಸಂಸಾರಗಳು)

(ಎ) ಕೊಳಚೆ ಪ್ರದೇಶವು ಖಾಸಗೀ ಜಮೀನಿನಲ್ಲಿರುವುದರಿಂದ ಈ ಜಮೀನನ್ನು ಆಕ್ವೈರ್ ಮಾಡಲು ಜಮೀನಿನ ಮಾಲೀಕನಿಗೆ ಕೈಪತ್ರವನ್ನು (ನೋಟೀಸ್) ಜಾರಿ ಮಾಡಲಾಗಿದೆ. ಪಿತನ ಧೈ ಡಾ॥ ಅಂಬೇಡ್ಕರ್ ಸ್ಮಾರಕ ಸಂಸ್ಥೆಯು ಬೆಂಗಳೂರಿನ ೫ನೇ ಅಡಿಷನಲ್ ೧ನೇ ಮುನ್ಸಿಫರ್ ನ್ಯಾಯಾಲಯದಿಂದ ೧೯೭೩ರ ಸಾಲಿನ ೨೯೦ ಅಸಲು ಕೇಸಿನಲ್ಲಿ ತಡೆ ಆಜ್ಞೆಯನ್ನು ತಂದಿದ್ದಾರೆ. ಈ ಕಾರಣದಿಂದ ಮುಂದಿನ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಾಗಿಲ್ಲ.

(ಆ) ಈ ಆಂಜನೇಯ ಬ್ಲಾಕಿನ ಬಡವಣೆಯಲ್ಲಿರುವ ಕೊಳಚೆ ಪ್ರದೇಶವು ಖಾಸಗೀ ಜಮೀನಿನಲ್ಲಿರುವುದರಿಂದ ಭಾರತ ಸರ್ಕಾರದ ಕೊಳಚೆ ಪ್ರದೇಶಗಳಿಗೆ ಬಳಸುವ ಹಣವನ್ನು ಇಲ್ಲಿಗೆ ಬೇಕಾಗುವ ಪೌರ ಸೌಲಭ್ಯಗಳಿಗೆ ಬಳಸಲಿಲ್ಲ ಆದರೆ, ಸಾಧ್ಯವಾದ ಮಟ್ಟಿಗಿನ ಕಾರ್ಪೊರೇಷನ್ನಿನ ಹಣದಿಂದ ಮುಖ್ಯವಾದ ಸೌಲಭ್ಯಗಳನ್ನು ಅಂದರೆ ಕಕ್ಕಸ್ಸು ಮತ್ತು ನೀರು ಒದಗಿಸಲಾಗಿದೆ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್ —ಸ್ವಾಮಿ, ಕಳೆದ ೩೦ ವರ್ಷ ರಾಜ್ಯಾಮಿಲ್ ಮತ್ತು ಮಿನರ್ವ ಮಿಲಿನಲ್ಲಿ ಕೆಲಸಮಾಡತಕ್ಕ ಬಡವರು ಕೂಲಿಗಾರರು ಅಲ್ಲಿ ವಾಸವಾಗಿದ್ದಾರೆ ತಾವು ತಮ್ಮ ಉತ್ತರದಲ್ಲಿ ಎರಡು ಅಂಶಗಳನ್ನು ಹೇಳಿದ್ದೀರಿ. ಇದು ಪ್ರೈವೇಟ್ ಲ್ಯಾಂಡ್ ಇದಕ್ಕೆ ನೋಟೀಸ್ ಕೊಟ್ಟಿದಾರೆಂದು, ಮತ್ತೊಂದು ಒಂದು ಅಸೋಷಿಯೇಷನ್‌ನಿಂದ ತಡೆಯಾಜ್ಞೆ ಬಂದಿದೆ ಎಂದು. ಅಲ್ಲಿ ವಾಸ ಮಾಡತಕ್ಕವರಿಗೆ ೪೦ ವರ್ಷಗಳಿಂದಲೂ ಪರಿಹಾರ ದೊರೆಯಲಿಲ್ಲ. ೧೯೬೭ನೇ ಇಸವಿಯಲ್ಲಿ ಸ್ವಾತಂತ್ರ ಬಂದ ಬಳಿಕ ಆಗಿನ ಮುಖ್ಯಮಂತ್ರಿಗಳಾದ ಕೆ.ಸಿ. ರೆಡ್ಡಿಯವರು ಬಂದು ಅಭಯ ಕೊಟ್ಟಿದ್ದರು. ಆದರೆ ಇದುವರೆವಿಗೂ ಆಗಿಲ್ಲ, ತಮ್ಮ ಕಾಲದಲ್ಲಿಯಾದರೂ ಲೇಔಟ್ ಮಾಡಿಸಿ ಅಲ್ಲಿ ಎಷ್ಟು ಜನಕ್ಕೆ ಆಗುತ್ತದೋ ಅಷ್ಟು ಜನಕ್ಕೆ ಸೈಟುಗಳನ್ನು ಕೊಟ್ಟು ಉಳಿದವರಿಗೆ ಬೇರೆ ಕಡೆಗೆ ಕೊಡುವ ವ್ಯವಸ್ಥೆ ಮಾಡುತ್ತೀರಾ ?

† ಶ್ರೀ ಡಿ.ಕೆ ನಾಯ್ಕರ್.—ಮಾನ್ಯ ಅಧ್ಯಕ್ಷರೇ, ೧೯೬೭ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪರಿಹಾರ ಕೊಡುತ್ತೇವೆಂದು ಹೇಳಿದ್ದು ಮಾನ್ಯ ಸದಸ್ಯರಿಗೆ ಬಿಟ್ಟು ಕೊಟ್ಟಿದ್ದು ಅಲ್ಲಿರತಕ್ಕ ಕೊಳಚೆ ಪ್ರದೇಶದ ೧೮ ಗುಂಟೆ ಜಾಗದಲ್ಲಿ ಸಾಧಾರಣವಾಗಿ ೨೦೦ ಗುಡಿಸಲುಗಳನ್ನು ಹಾಕಿಕೊಂಡು ಜನ ವಾಸ ಮಾಡುತ್ತಿದ್ದರು, ಈ ೧೮ ಗುಂಟೆ ಜಾಗ ಪ್ರೈವೇಟ್ ಜಾಗ ಇದರ ಆಕ್ವಿಜಿಷನ್ ಬಗ್ಗೆ ಕಾರ್ಪೊರೇಷನ್‌ನವರು ಪ್ರೊಸೀಡಿಂಗ್ಸ್ ನಡೆಸಿದ್ದಾರೆ. ಆ ಜಾಗವನ್ನು ೩೨ ಮಂದಿಗಿಂತ ಹೆಚ್ಚಿಗೆ ಕೊಡುವುದಕ್ಕೆ ಆಗುವುದಿಲ್ಲ. ಮಿಕ್ಕವರಿಗೆ ಬೇರೆ ಕೊಡಬೇಕೆಂದು ಒಂದು ಲಕ್ಷ ೬೮ ಸಾವಿರ ರೂಪಾಯಿ ಪ್ರೋಪೋಸ್ ಮಾಡಿ ಒಂದು ಸ್ಕೀಮ್ ಮಾಡಿ ಬಿ.ಡಿ.ಎ. ಅವರನ್ನು ಕೇಳಿದ್ದೇವೆ. ಇಷ್ಟರಲ್ಲಿ ಒಂದು ಸಂಸ್ಥೆ ಕೋರ್ಟಿಗೆ ಎಳೆದಿದೆ, ಕಾರ್ಪೊರೇಷನ್ನಿನವರು ಇಂಟರೆಸ್ಟ್ ತೆಗೆದುಕೊಂಡು ಕಂಟೆಸ್ಟ್ ಮಾಡುತ್ತಿದ್ದಾರೆ.

ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ್—ಈ ಬಗ್ಗೆ ತೆಗೆದುಕೊಂಡಿರುವ ಕ್ರಮಕ್ಕೆ ಸಂತೋಷ ಆದರೆ, ಆದಷ್ಟು ಬೇಗ ಅಲ್ಲಿ ಆಗುವಷ್ಟು ಸೈಟುಗಳನ್ನು ಹಾಚಿ ಉಳಿದವರಿಗೆ ಬೇರೆ ಕಡೆ ಲೇಔಟ್‌ಗಳಲ್ಲಿ ಕೊಡುವುದಕ್ಕೆ ಏಕಕ್ಕೆ ಪ್ರಯತ್ನ ಮಾಡಬಾರದು ? ಅಲ್ಲಿ ೩೪ ಜನಕ್ಕೆ ಮಾತ್ರ ಆಗಂತ್ತದೆಂದುಹೇಳುತ್ತೀರಿ, ಬಡವರ ಉದ್ಧಾರ ಚೆನ್ನಾಗಿ ಆಗಂತ್ತದೆಂದು ಹೇಳುತ್ತಿದ್ದೀರಿ, ಬೇರೆ ಕಡೆ ಲೇಔಟ್‌ನಲ್ಲಿ ಜಾಗ್ರತೆ ಕೊಡಿ.

ಶ್ರೀ ಡಿ.ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ, ನಾನು ಹೇಳಿದೆ, ೧ ಲಕ್ಷ ೬೮ ಸಾವಿರ ರೂಪಾಯಿ ಪ್ರೊಪೋಸ್ ಮಾಡಿ ಸ್ಕೀಮು ಮಾಡಿದ್ದಾರೆ. ಆ ಬಗ್ಗೆ ಬಿ.ಡಿ.ಎ.ಗೂ ಬರೆದಿದ್ದಾರೆ, ಆದಷ್ಟು ಜಾಗ್ರತೆ ಅವರಿಗೂ ಕೊಡಲಿಕ್ಕೆ ವ್ಯವಸ್ಥೆ ಮಾಡಲಾಗುತ್ತೆ.

ಕುಡ್ಲೂರು ಗ್ರಾಮದಲ್ಲಿನ ಮಾಧ್ಯಮಿಕ ಶಾಲಾ ಕಟ್ಟಡದ ದುರಸ್ತಿ

787. ಶ್ರೀ ಹಂಜಿ ಶಿವಣ್ಣ (ತರೀಕೆರೆ).... ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :

(ಅ) ತರೀಕೆರೆ ತಾಲ್ಲೂಕು ಅಮೃತಾಪುರದ ಹೋಬಳಿ ಕುಡ್ಲೂರು ಗ್ರಾಮದಲ್ಲಿ ಮಿಡ್ಲ್ ಸ್ಕೂಲನ್ನು ರಿಪೇರಿ ಮಾಡಲು ಯಾವ ವರ್ಷ ಸರ್ಕಾರ ಹಣ ಒದಗಿಸಿತ್ತು ;

(ಆ) ಹಾಗಿದ್ದಲ್ಲಿ ರಿಪೇರಿ ಮಾಡುವ ಬದಲು ಆದನ್ನು ಒಡೆದು ಹಾಕಿ ಇಲಿಯವರೆವಿಗೂ ಕಟ್ಟಡವನ್ನು ಕಟ್ಟದಿರಲು ಕಾರಣವೇನು ;